**ಸಾಕ್ಷಿಗೆ ದಿನಾಂಕ:03-03-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 5 ನೇ ಪ್ರತಿವಾದಿ ಪರ ಶ್ರೀ. BTK ವಕೀಲರಿಂದ ::**

5 ನೇ ಪ್ರತಿವಾದಿಗೆ ನಾವು 2 ಎಕರೆ 2 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ. ಸದರಿ ಜಮೀನು ನಮ್ಮ ಅಜ್ಜಿ ನಂಜಮ್ಮ ರವರಿಂದ ನಮ್ಮ ತಂದೆ ಚಂದ್ರಪ್ಪ ರವರಿಗೆ ಬಂದಿರುತ್ತದೆ. 5 ನೇ ಪ್ರತಿವಾದಿಗೆ ನಾವು 2011 ರಲ್ಲಿ ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ. ಸದರಿ ಜಮೀನು ಮಾರಾಟದ ಸಮಯದಲ್ಲಿ ಖುಷ್ಕಿ ಜಮೀನು ಆಗಿತ್ತು. ಸದರಿ ಜಮೀನಿನಲ್ಲಿ ಪ್ರಸ್ತುತ 5 ನೇ ಪ್ರತಿವಾದಿಯು ಅಡಿಕೆ ತೋಟವನ್ನು ಮಾಡಿರುತ್ತಾರೆ.

**:: ಪಾಟೀ ಸವಾಲು :: 6 ನೇ ಪ್ರತಿವಾದಿ ಪರ ಶ್ರೀ. CBV ವಕೀಲರಿಂದ ::**

ನನ್ನ ತಂದೆ ಚಂದ್ರಪ್ಪ ರವರು ವ್ಯವಸಾಯ ಹೊರತಪಡಿಸಿ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ನಮ್ಮ ಕುಟುಂಬದ ಮನೆಯನ್ನು ಗಂಗಮ್ಮನವರ ಮನೆ ಎಂದು ಕರೆಯುತ್ತಾರೆ. ಕೋರನಹಳ್ಳಿ ಗ್ರಾಮದ ಸರ್ವೇ ನಂಬರ್ 95 ರಲ್ಲಿ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ 1 ಎಕರೆ 7 ಗುಂಟೆ ಜಮೀನು ಇರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ 1 ಎಕರೆ 7 ಗುಂಟೆ ಜಮೀನ್ನು ಕೆ ಬಸವರಾಜಪ್ಪ ಬಿನ್ ಮುರುಗ್ಯಪ್ಪ ಎನ್ನುವವರಿಗೆ ನನ್ನ ತಂದೆ ಚಂದ್ರಪ್ಪ, 2 ನೇ ಪ್ರತಿವಾದಿ ಮತ್ತು ನಂಜುಂಡಪ್ಪ ರವರು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನನ್ನ ತಂದೆ ಬಸವರಾಜಪ್ಪ ರವರಿಂದ 1983-84 ರಲ್ಲಿ ಪುನಃ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಡಿ ಕೆ ಶಂಕರಪ್ಪ ಬಿನ್ ಕಿಟ್ಟಪ್ಪ , ಜಗದೀಶ ಬಿನ್ ಕಿಟ್ಟಪ್ಪ ಎನ್ನುವವರಿಗೆ ಸದರಿ ಆಸ್ತಿಯನ್ನು ಮತ್ತೊಮ್ಮೆ ನಾನು, ನನ್ನ ತಂದೆ, 2 ನೇ ಪ್ರತಿವಾದಿ ಮತ್ತು ನಂಜುಂಡಪ್ಪ ಹಾಗೂ ಹಾಲಪ್ಪ ರವರು 1991-92 ರಲ್ಲಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿ.

ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಕೋರನಹಳ್ಳಿ ಗ್ರಾಮದ ಸರ್ವೇ ನಂಬರ್ 98 ರಲ್ಲಿ ಮತ್ತೊಂದು 7 ಗುಂಟೆ ತೋಟ ಇತ್ತು ಎಂದರೆ ಸರಿ. ಸದರಿ ತೋಟವನ್ನು ನಾನು, ನನ್ನ ತಂದೆ, 2 ನೇ ಪ್ರತಿವಾದಿ ಮತ್ತು ನಂಜುಂಡಪ್ಪ ಹಾಗೂ ಹಾಲಪ್ಪ ರವರು 1991-92 ರಲ್ಲಿ ಟಿ ಎಸ್ ಇಂದುಕುಮಾರ್ ಮತ್ತು ಬಿ ಕೆ ಶಂಕರಪ್ಪ ಎನ್ನುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಮಾರಾಟವು ನಮ್ಮ ಒಂದು ಟ್ರಾಕ್ಟರ್ ಸಾಲಕ್ಕೆ

ಸಂಬಂಧಪಟ್ಟಿದ್ದಾಗಿರುತ್ತದೆ. ಕೋರನಹಳ್ಳಿ ಗ್ರಾಮದ ಸರ್ವೇ ನಂಬರ್ 2/2 ರಲ್ಲಿ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ 1 ಎಕರೆ 4 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನನ್ನು ಸಹ 1992-93 ರಲ್ಲಿ ಶಂಕರಪ್ಪ ಎನ್ನುವವರಿಗೆ ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಈಗ ಮಾರಾಟ ಮಾಡಿರುತ್ತೇವೆ ಎಂದು ಹೇಳಿರುವ ಅಷ್ಟು ಜಮೀನುಗಳು ನನ್ನ ಅಜ್ಜ ನಂಜಪ್ಪ ರವರ ಕಡೆಯಿಂದ ಬಂದ ಆಸ್ತಿಗಳಾಗಿರುತ್ತವೆ ಎಂದರೆ ಸರಿ.

ನನ್ನ ಅಜ್ಜಿಯ ಹೆಸರು ನಂಜಮ್ಮ ಆಗಿರುತ್ತದೆ ಎಂದರೆ ಸರಿ. ಸದರಿ ನಂಜಮ್ಮ ರವರು ಯಾವ ಉರಿನವರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ನಂಜಮ್ಮ ರವರ ತಂದೆಯ ಹೆಸರು ಪೂಜಾರಿ ಗಿರಿಯಪ್ಪ ಆಗಿರುತ್ತದೆ ಎಂದರೆ ಸರಿ. ಈಗ ಹೇಳುತ್ತಿರುವ ನಂಜಮ್ಮ ರವರನ್ನೇ ನನ್ನ ಅಜ್ಜ ಮದುವೆ ಆಗಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ನನ್ನ ತಂದೆ ಚಂದ್ರಪ್ಪ ಮಾತ್ರ ಒಬ್ಬರೇ ಗಂಡು ಮಗ ಆಗಿರುತ್ತಾರೆ ಎಂದರೆ ಸರಿ. ದಾವಾ ಸರ್ವೇ ನಂಬರ್ ಹಿಂದೆ 7 ಎಕರೆ 2 ಗುಂಟೆ ಆಗಿತ್ತು ಎಂದರೆ ಸರಿ. ಸದರಿ ಜಮೀನು ನನ್ನ ಅಜ್ಜಿ ನಂಜಮ್ಮ ರವರಿಗೆ ಅವರ ತಂದೆ ಪೂಜಾರಿ ಗಿರಿಯಪ್ಪ ರವರಿಂದ ಬಂದ ಆಸ್ತಿ ಆಗಿರುತ್ತದೆ ಎಂದರೆ ಸರಿ.

ಸದರಿ 7 ಎಕರೆ 2 ಗುಂಟೆ ಜಮೀನು ಅಷ್ಟನ್ನು ಸಹ ನನ್ನ ಅಜ್ಜಿ ನಂಜಮ್ಮ ರವರು ಹಿಂದೆ ಬಸಪ್ಪ ಬಿನ್ ಅಣ್ಣೇಬಸಪ್ಪನ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು ನನ್ನ ತಂದೆ ದಿಃ 27.02.1959 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ಸದರಿ ಖರೀದಿಯನ್ನು ನಮ್ಮ ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಿಂದ ಖರೀದಿ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2 ನೇ ಪ್ರತಿವಾದಿಯ ಹೆಂಡತಿ ಕ್ಯಾತನಬೀಡು ಗ್ರಾಮದ ಪಾರ್ವತಮ್ಮ ಆಗಿರುತ್ತಾರೆ ಎಂದರೆ ಸರಿ. ಸದರಿಯವರು 30.06.1994 ರಂದು ಮದುವೆ ಆಗಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಸುಮಾ/6 ನೇ ಪ್ರತಿವಾದಿ ಒಬ್ಬಳೇ ಮಗಳಾಗಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾರ್ವತಮ್ಮ ರವರು 1 ತಿಂಗಳು ಗರ್ಭಿಣಿಯಾಗಿದ್ದ ಸಮಯದಲ್ಲಿ ನಮ್ಮ ಕುಟುಂಬದವರು ಅವರನ್ನು ಒತ್ತಾಯ ಪೂರ್ವಕವಾಗಿ ಮನೆಯಿಂದ ಹೊರದೂಡಿರುತ್ತೇವೆ ಎಂದರೆ ಸರಿಯಲ್ಲ. ಮಗುವಾದ ನಂತರದಲ್ಲಿ 6 ನೇ ಪ್ರತಿವಾದಿ ಹಾಗೂ ಅವರ ತಾಯಿ ಪಾರ್ವತಮ್ಮ ರವರು ನಮ್ಮ ಕುಟುಂಬಕ್ಕೆ ಬರಲು ಪ್ರಯತ್ನಿಸಿದ್ದರೂ ಸಹ ನಾವು ಅವರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ನಿಪಿ16 ರಲ್ಲಿ 2 ನೇ ಪ್ರತಿವಾದಿಗೆ ಅವರ ಹಿಸ್ಸೆ ಬಾಬ್ತು 25

ಸಾವಿರ ಹಣ ನೀಡಲಾಗಿರುತ್ತದೆ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ದಾವಾ ಸರ್ವೇ ನಂಬರ್ ಆಸ್ತಿಯಾದ 7 ಎಕರೆ 2 ಗುಂಟೆ ಜಮೀನನ್ನು ಹಿಂದೆ IOB Bank ಗೆ ಆಧಾರ ಮಾಡಲಾಗಿತ್ತು ಎಂದರೆ ಸರಿ. ಸದರಿ ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ ಎನ್ನುವ ಕಾರಣಕ್ಕೆ ಸದರಿ ಆಸ್ತಿಯು ಮಾರಾಟಕ್ಕೆ ಬಂದಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಸದರಿ 7 ಎಕರೆ 2 ಗುಂಟೆ ಬಾಬ್ತು 3 ಎಕರೆ ಜಮೀನನ್ನು ನಮ್ಮ ಗ್ರಾಮದ ಕೆ ಎನ್ ರುದ್ರಪ್ಪ ಎನ್ನುವವರಿಗೆ ನಾವು ಮಾರಾಟ ಮಾಡಿ ಸದರಿ ಸಾಲವನ್ನು ತೀರಿಸಿರುತ್ತೇವೆ ಎಂದರೆ ಸರಿ. ಇನ್ನು ಉಳಿಕೆ 4 ಎಕರೆ 2 ಗುಂಟೆ ಜಮೀನನ್ನು ನಿಪಿ16 ವಿಭಾಗಪತ್ರದಡಿ ನನ್ನ ತಂದೆಗೆ 2 ಎಕರೆ ಹಾಗೂ ನನಗೆ 2 ಎಕರೆ 2 ಗುಂಟೆ ಎನ್ನುವಂತೆ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿಪಿ16 ರಲ್ಲಿ 2ನೇ ಪ್ರತಿವಾದಿಗೆ 25 ಸಾವಿರ ರೂಪಾಯಿ ಕೊಟ್ಟಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಿಪಿ16 ವಿಭಾಗ ಪತ್ರ ಮಾಡಿಕೊಳ್ಳುವ ಸಮಯದಲ್ಲಿ 6ನೇ ಪ್ರತಿವಾದಿಯ ಒಪ್ಪಿಗೆಯನ್ನು ನಾವು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಬಗ್ಗೆ ಆ ಸಮಯದಲ್ಲಿ ನಮಗೆ ಮಾಹಿತಿ ಇರಲಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ 6ನೇ ಪ್ರತಿವಾದಿಯು ಸೇರ್ಪಡೆಯಾಗಲು ಅರ್ಜಿ ಸಲ್ಲಿಸಿದ ನಂತರದಲ್ಲಿ ಸದರಿಯವರು ನಮಗೆ ತಿಳಿದಿರುವುದಿಲ್ಲ ಎಂದು ನಾವು ಯಾವುದೇ ತಕರಾರು ಆಗಿರುವುದಿಲ್ಲ. ನಾನು ಹೇಳುವಂತೆ 2ನೇ ಪ್ರತಿವಾದಿಗೆ ನಿಪಿ16ರಡಿ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಗಾಗಲೀ ಅಥವಾ ಅವರ ತಾಯಿಗಾಗಲೀ ನಮ್ಮ ಕುಟುಂಬದಿಂದ ಯಾವುದೇ ಜೀವನಾಂಶವನ್ನು ನೀಡಿರುವುದಿಲ್ಲ, ಕಾರಣ ಅವರು ಯಾರೆಂದು ನಮಗೆ ಗೊತ್ತಿರುವುದಿಲ್ಲ.

ನಿಪಿ17 ಕ್ರಯ ಪತ್ರದಡಿ ಜಮೀನು ಮಾರಾಟ ಮಾಡಲು ನಮ್ಮ ಕುಟುಂಬಕ್ಕೆ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಸುಮಾರು ಸಾಲಗಳು ಇತ್ತು ಎಂದು ನುಡಿದಿರುತ್ತಾರೆ. ಆ ರೀತಿ ಸಾಲ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ, ಕಾರಣ ಅವುಗಳು ಕೈ ಸಾಲ ಆಗಿದ್ದವು.

2013 ರಲ್ಲಿ ನಿಪಿ18ರ ಪ್ರಕಾರ ನನ್ನ ತಂದೆಗೆ ಬಂದ 2 ಎಕರೆ ಜಮೀನನ್ನು ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗಡಿಯಲ್ಲೂ ಸಹ ನನ್ನ ತಂದೆ ಹಾಗೂ 2ನೇ ಪ್ರತಿವಾದಿಗೆ 1 ಲಕ್ಷ ಹಣವನ್ನು ನಾನು ನೀಡಿರುತ್ತೇನೆ ಎಂದು

ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆ ಆಗುವ ಪೂರ್ವದಲ್ಲಿ ಸಹ 6 ನೇ ಪ್ರತಿವಾದಿಯ ಒಪ್ಪಿಗೆ ಪಡೆದಿರುವುದಿಲ್ಲ. ಸದರಿ ದಾಖಲೆಯಲ್ಲಿ ತೋರಿಸಿರುವಂತೆ ನನ್ನ ತಂದೆಗಾಗಲೀ ಅಥವಾ 2 ನೇ ಪ್ರತಿವಾದಿಗಾಗಲೀ ನಾನು ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಆಸ್ತಿ ಕೊಡುವುದನ್ನು ತಪ್ಪಿಸುವ ದುರುದ್ದೇಶದಿಂದ ನಿಪಿ16 ಮತ್ತು 18 ದಾಖಲಾತಿಗಳಲ್ಲಿ 2 ನೇ ಪ್ರತಿವಾದಿಗೆ ಹಿಸ್ಸೆ ಬಾಬ್ತು ಹಣವನ್ನು ನೀಡಿರುವುದಾಗಿ ಸುಳ್ಳಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 6 ನೇ ಪ್ರತಿವಾದಿಗೂ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: